# ಭಾಗ್ಯವತಿ, ಪುಣ್ಯವತಿ



**ಸಾಕ್ಷಾತ್ ಲಕ್ಷ್ಮೀ ಸ್ವರೂಪಿ ಕಲಾವಿದೆಯಾಗಿದ್ದ ಸರೋಜಮ್ಮ ಅವರದ್ದು, ಸದಾ ಘನತೆಯಿಂದ ಇರುತ್ತಿದ್ದ ವ್ಯಕ್ತಿತ್ವ. 'ನನ್ನ ಸಮಕಾಲೀನರೆಲ್ಲ ಅಮ್ಮನಂಥ ಸ್ನೇಹಿತೆಯನ್ನು ಅವರಲ್ಲಿ ಕಾಣುತ್ತಿದ್ದೆವು' ಎನ್ನುವ ನಟಿ ಜಯಮಾಲಾ ತಾವು ಕಂಡಂತೆ ಸರೋಜಮ್ಮ ಹೇಗೆಲ್ಲಾ ಇದ್ದರು ಎನ್ನುವುದನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ.**

■ ನಿರೂಪಣೆ: **ರಶ್ಮಿ ಎಸ್**

'ನಾನೇ ಭಾಗ್ಯವತಿ, ನಾನೇ ಪುಣ್ಯವತಿ' ಹಾಡಿನಂತೆಯೇ ಇದ್ದಾರಲ್ಲ ಪುಣ್ಯಾತ್ಗಿತ್ತಿ ಅಂತ ಪಾರ್ವತಮ್ಮ ಉದ್ಗಾರ ತೆಗೆದಿದ್ದರು. ಚಿ. ಉದಯಶಂಕರ್ ಅವರ ಈ ಹಾಡು ಕೇಳಿದಾಗಲೆಲ್ಲ ಬಿ. ಸರೋಜಾದೇವಿ ನೆನಪಾಗ್ತಿದ್ರಂತೆ.

ನನಗೂ ಹಂಗೇನೆ ನೆನಪಾಗೋದು. ಸಾಕ್ಷಾತ್ ಲಕ್ಷ್ಮೀ ಸ್ವರೂಪಿ ಕಲಾವಿದೆ ಅವರು. ಸದಾ ಘನತೆಯಿಂದ ಇರುತ್ತಿದ್ದ ಅವರಲ್ಲಿ ನನ್ನ ಸಮಕಾಲೀನರೆಲ್ಲ ಅಮ್ಮನಂಥ ಸ್ನೇಹಿತೆಯನ್ನು ಕಾಣುತ್ತಿದ್ದೆವು.

ಒಮ್ಮೆ ಅವರ ಹುಟ್ಟುಹಬ್ಬಕ್ಕೆ ಉಡುಗೊರೆ ಕೊಡಲು ಡಾ. ರಾಜಕುಮಾರ್ ಅವರು ಪಾರ್ವತಮ್ಮ ಅವರಿಗೆ ಹೇಳಿದರು. ಪಾರ್ವತಮ್ಮ ಹೋಗುವಾಗ, ಬಾ... ಸರೋಜಾದೇವಿ ಅವರ ಮನೆ ತೋರಿಸುವೆ ಎಂದು ನನ್ನನ್ನೂ ಅವರ ಚೆನ್ನೈ ಮನೆಗೆ ಕರೆದೊಯ್ದರು. ನಾವು ತಲುಪುವಾಗ ಮಧ್ಯಾಹ್ನವಾಗಿತ್ತು. ಅದೇ ಸಮಯದಲ್ಲಿ ಅವರ ಮನೆಗೆ ಖ್ಯಾತ ನಿರ್ಮಾಪಕ ಚಿನ್ನಪ್ಪ ದೇವರು ಸಹ ಬಂದಿದ್ದರು.

ಸರೋಜಾದೇವಿ ಅವರು ಮಧ್ಯಾಹ್ನದ ಸವಿ ನಿದ್ದೆಯಲ್ಲಿದ್ದರು. ಆದರೆ ಚಿನ್ನಪ್ಪ ದೇವರು, ಸಲುಗೆ ವಹಿಸಿ, ನಮ್ಮನ್ನೆಲ್ಲ ನೇರ ಅವರ ಮಲಗುವ ಮನೆಗೆ ಕರೆದೊಯ್ದರು. ಕೆಂಪು ಅಂಚಿರುವ ಕಡುನೀಲಿ



ಕರ್ನಾಟಕ ವಾಣಿಜ್ಯ ಮಂಡಳಿ ಆಯೋಜಿಸಿದ್ದ ಬೆಳ್ಳಿಹೆಜ್ಜೆ ಕಾರ್ಯಕ್ರಮದಲ್ಲಿ ತಾವು ನಟಿಸಿದ ಸಿನಿಮಾಗಳ ಚಿತ್ರಗಳನ್ನು ವೀಕ್ಷಿಸುತ್ತಿರುವ ಸರೋಜಮ್ಮ.